


ನಿಮ್ಮ ಪ್ರತಿಕ್ರಿಯೆ ಏನು?

ಇಲ್ಲಿನ ಸಮಾಜ ಈಗಲೂ ಬಹುಪತ್ನಿತ್ವವನ್ನು ನಂಬುತ್ತದೆ. ಸಾಂಪ್ರದಾಯಿಕ ಇಸ್ಲಾಮಿಕ್ ಇದನ್ನು ಒಪ್ಪುವುದರ ಬಗ್ಗೆ ನನ್ನ ತಕರಾರಿಲ್ಲ. ಆದರೆ, ತೀರಾ ಅನಿವಾರ್ಯ ಮತ್ತು ಯಾವುದೇ ದಾರಿ ಇಲ್ಲದಾಗ ಮಾತ್ರ ಮರು ಮದುವೆಯಾಗಬಹುದು ಎಂದು ಪವಿತ್ರ ಖುರಾನ್ ಉಲ್ಲೇಖಿಸುತ್ತದೆ. ಉದಾಹರಣೆಗೆ ಮೊದಲನೆ ಹೆಂಡತಿ ದೈಹಿಕ ಅಥವಾ ಮಾನಸಿಕ ಕಾಯಿಲೆಗೊಳಗಾಗಿ ಮಕ್ಕಳಿಗೆ ಜನ್ಮ ನೀಡಲು ಅಶಕ್ತಳಾದಾಗ, ಮತ್ತಿತರ ಕಾರಣಗಳಿಗಾಗಿ ದಾಂಪತ್ಯ ಸುಖದ ಸಾಧ್ಯತೆಗಳಿಲ್ಲದಾಗ ಎರಡನೇ ವಿವಾಹಕ್ಕೆ ಅವಕಾಶವಿದೆ ಅಷ್ಟೇ. ಆದರೆ ಈ ದಾಖಲಿತ ಸತ್ಯವನ್ನು ಎಲ್ಲೂ ನಾವು ಪ್ರಚಾರ ಮಾಡುತ್ತಿಲ್ಲ! ಏಕೆಂದರೆ ಉದ್ದೇಶಪೂರ್ವಕ ಬೌದ್ಧಿಕ ನಿರ್ಲಕ್ಷ್ಯ ಮತ್ತು ಷರಿಯಾ ಕಾನೂನಿನ ತಿರುಚು ವ್ಯಾಖ್ಯಾನ ಅಥವಾ ತಿಳಿವಳಿಕೆಯ ಕೊರತೆಯಿಂದ ಕೆಲವು ಗಂಡಸರಿಗೆ ಇದು ಅರ್ಥವಾಗಿಲ್ಲ. ಅವರಿಗೆಲ್ಲಾ ಮದುವೆ ಎಂದರೆ ಕಾಮ ಮತ್ತು ಬಯಕೆ ತೀರಿಸಿಕೊಳ್ಳಲು ಇರುವ ದಾರಿ ಅಷ್ಟೇ.

ಇದರಿಂದ ಮೊದಲನೇ ಹುಡುಗಿಗಷ್ಟೆ ಅಲ್ಲ, ನಂತರ ಮದುವೆಯಾದ ಹುಡುಗಿಯರಿಗೂ ಬಹಳ ಅನ್ಯಾಯವಾಗುತ್ತದೆ. ಇಡೀ ಕೌಟುಂಬಿಕ ವಾತಾವರಣಕ್ಕೆ ಹೊಡೆತ ಬೀಳುತ್ತದೆ. ಮಕ್ಕಳಿಗೆ ತಂದೆ ರೋಲ್ ಮಾಡೆಲ್ ಆಗಿರುತ್ತಾನೆ. ಈ ಅವಗುಣಗಳು ಅವರಿಗೂ ಹರಿಯುತ್ತವೆ ಮತ್ತು ಮಹಿಳೆಯರ ಎಲ್ಲಾ ಬಗೆಯ ಯೋಚನೆಗಳು ಗಂಡಸರ ಹಿಡಿತ ಮತ್ತು ಪ್ರಾಬಲ್ಯದಲ್ಲೇ ಇರುವಂತಾಗುತ್ತದೆ. ಇದು ಅವರನ್ನು ಆಧುನಿಕ ಶಿಕ್ಷಣ ಪಡೆಯದಂತೆ, ಯಾವುದೇ ಬಗೆಯ ಸಾರ್ವಜನಿಕ ವೃತ್ತಿ ಜೀವನ ಆರಂಭಿಸದಂತೆ, ಒಟ್ಟಾರೆ ಅಭಿವೃದ್ಧಿಯ ದಾರಿಯ ಕಡೆಗೆ ಹೋಗದ ಹಾಗೆ ಮಾಡುತ್ತದೆ.

◆ ನೀವು 'ಕವಯಿತ್ರಿ ಅಥವಾ ಬರಹಗಾರ್ತಿ' ಆಗಿ ಗುರುತಿಸಿಕೊಂಡ ಆರಂಭದ ದಿನಗಳನ್ನು ನೆನಪಿಸಿಕೊಳ್ಳಿ. ಆ ಸೃಷ್ಟಿಶೀಲ ದಿನಗಳ ನಿಮ್ಮ ಮನೋಬಿಕ್ಕಟ್ಟು ಹೇಗಿತ್ತು?

ನನ್ನಿಡೀ ಕುಟುಂಬ, ಗೆಳೆಯರು, ಶಿಕ್ಷಕರೂ, ಸಹೋದ್ಯೋಗಿಗಳು ಮತ್ತು ಸ್ವತಃ ಖ್ಯಾತ ಕವಿ ಮೆಹಮೂದ್ ದಾರ್ವಿಶ್ ಅವರ ಸಾಹಿತ್ಯಕ ಬೆಂಬಲ ಮತ್ತು ಪ್ರೋತ್ಸಾಹ ನನಗಿದ್ದರೂ ನನಗೆ ನನ್ನದೇ ಆದ ಕೀಳರಿಮೆ, ಹಿಂಜರಿಕೆಗಳಿದ್ದವು. ಮತ್ತದು ಸ್ವಾಭಾವಿಕವೂ ಹೌದು. ಫ್ರಾನ್ಸಿಗೆ ಪ್ರಯಾಣಿಸಿ ದಾರ್ವಿಶ್ ಅವರನ್ನು ಭೇಟಿ ಮಾಡಬೇಕಿತ್ತು. ಎರಡನೇ ಪ್ಯಾಲೆಸ್ತೀನ್ ಅಂತರ್ಯುದ್ಧ ಶುರುವಾದ್ದರಿಂದ ಹೋಗಲಾಗಲಿಲ್ಲ. 2000ನೇ ಇಸ್ವಿಯಲ್ಲಿ ನಮ್ಮ ಭೇಟಿ ಪ್ರಾಜೆಕ್ಟರ್ ಸ್ಕ್ರೀನ್ ಮೂಲಕ ನಡೆಯಿತು. ಅವರ ಬಳಿ ಕವನ ಸಂಕಲನವನ್ನು ಹೊರತರುವ ನನ್ನ ಅದಮ್ಯ ಹಂಬಲವನ್ನು ವ್ಯಕ್ತಪಡಿಸಿದ್ದೆ. ಅವರು ಬಹಳ ಖುಷಿಯಿಂದ ಮತ್ತು ಸಂಪೂರ್ಣ ಆಸಕ್ತಿಯಿಂದ ನನ್ನನ್ನು ಪ್ರೋತ್ಸಾಹಿಸಿದ್ದರು. ಆದರೆ ನನ್ನ ಪುಸ್ತಕ ಬಿಡುಗಡೆಯಾಗುವ ಮೊದಲೇ